ಅ) ಈ ಸದಸ್ಯರಿಗೆ ಅವಕಾಶ ಕಲ್ಪಿಸಲಾಗುವುದೇ?

ಇ) ಹಾಗಿದ್ದಲ್ಲಿ ಸುತ್ತೋಲೆಗೆ ಸೂಕ್ತ ತಿದ್ದುಪಡಿ ತರಲಾಗುವುದೇ?

ಶ್ರೀ ಹೆಚ್. ವಿಶ್ವನಾಥ್ (ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು) :

ಅ) ಸರ್ಕಾರಿ ಪ್ರೌಢಶಾಲೆಗಳಲ್ಲಿ ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷರಾಗಲು ಅವಕಾಶವಿರುತ್ತದೆ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

ಔಷಧಿ ನಿಯಂತ್ರಣ ಇಲಾಖೆಯ ಕಾರ್ಯ ನಿರ್ವಹಣೆ

2896 - ಶ್ರೀ ಎ.ಎಸ್. ಗುರುಸ್ವಾಮಿ (ಚಾಮುಂಡೇಶ್ವರಿ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ಜಿಲ್ಲೆಯ ಔಷಧಿ ನಿಯಂತ್ರಣ ಇಲಾಖೆಯಲ್ಲಿ ನಿಯಮಾನುಸಾರ ಸಿಬ್ಬಂದಿ ಇದ್ದಾರೆಯೆ?

ಆ) ಕಲಬೆರಕೆ ಹಾಗೂ ಅವಧಿ ಮೀರಿದ ಔಷಧಿ ಮಾರಾಟ ತಡೆಗಟ್ಟಲು ಕೈಗೊಂಡ ಕ್ರಮಗಳೇನು?

ಇ) ಎಷ್ಟು ಜಸ್ತಿ ಮಾಡಲಾಗಿದೆ? ದಾಖಲು ಮಾಡಿದ ಪ್ರಕರಣಗಳು ಎಷ್ಟು? ಶಿಕ್ಷೆಗೆ ಒಳಪಡಿಸಿದ ಪ್ರಕರಣಗಳು ಎಷ್ಟು?

ಈ) ಯುವ ಜನತೆ ಡ್ರಗ್ಸ್‌ನತ್ತ ಆಕರ್ಷಿತರಾಗುತ್ತಿದ್ದು ಇದನ್ನು ತಡೆಗಟ್ಟಲು ಕೈಗೊಂಡಿರುವ ಕ್ರಮ ಏನು?

ಡಾ|| ಎ.ಬಿ. ಮಾಲಕ ರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಮೈಸೂರಿನಲ್ಲಿ ಔಷಧಿ ನಿಯಂತ್ರಣ ಇಲಾಖೆಯ ಮೂರು ಕಛೇರಿಗಳಿದ್ದು ಅವುಗಳಲ್ಲಿ ಹಾಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿ ವಿವರಗಳು ಕೆಳಕಂಡಂತಿದೆ:-

ಹುದ್ದೆಗಳ ಹೆಸರು	ಮಂಜೂರಾಗಿರುವ ಹುದ್ದೆಗಳು	ಭರ್ತಿಯಾಗಿರುವ ಹುದ್ದೆಗಳು	ಖಾಲಿ ಇರುವ ಹುದ್ದೆಗಳು
ಉಪ ಔಷಧ ನಿಯಂತ್ರಕರು.	1	1	-
ಸಹಾಯಕ ಔಷಧ ನಿಯಂತ್ರಕರು.	2	1	1
ಔಷಧ ಪರಿವೀಕ್ಷಕರು.	5	4	1

ಹುದ್ದೆಗಳ ಹೆಸರು	ಮಂಜೂರಾಗಿರುವ ಹುದ್ದೆಗಳು.	ಭರ್ತಿಯಾಗಿರುವ ಹುದ್ದೆಗಳು.	ಖಾಲಿ ಇರುವ ಹುದ್ದೆಗಳು
ಅಧೀಕ್ಷಕರು.	2	2	-
ಪ್ರಥಮ ದರ್ಜೆ ಸಹಾಯಕರು.	2	2	-
ದ್ವಿತೀಯ ದರ್ಜೆ ಸಹಾಯಕರು.	1	-	1
ಬೆರಳಚ್ಚುಗಾರರು.	3	2	1
ವಾಹನ ಚಾಲಕರು	1	1	-
ಗ್ರೂಪ್ 'ಡಿ'.	3	3	-
ಒಟ್ಟು :	**20**	**16**	**4**

ಆ) ಔಷಧ ಪರಿವೀಕ್ಷಕರುಗಳು, ಔಷಧ ಮತ್ತು ಕಾಂತಿವರ್ಧಕ ನಿಯಮಗಳ ಪ್ರಕಾರ ಪರಿವೀಕ್ಷಣೆ ಮಾಡುತ್ತಾರೆ ಹಾಗೂ ಆಗಿಂದಾಗ್ಗೆ ಔಷಧಿಗಳ ಮಾದರಿಗಳನ್ನು ಪಡೆದು ವಿಶ್ಲೇಷಣೆಗೆ ಒಳಪಡಿಸುತ್ತಾರೆ. ವಿಶ್ಲೇಷಣಾ ವರದಿಯ ಪಲಿತಾಂಶದ ಮೇಲೆ ಕಲಬೆರಕೆ ಮತ್ತು ಅವಧಿ ಮೀರಿದ ಔಷಧಿ ಮಾರಾಟ ಕಂಡು ಬಂದಲ್ಲಿ ಕಾನೂನಿನ ಪ್ರಕಾರ ಕ್ರಮ ತೆಗೆದುಕೊಳ್ಳುತ್ತಾರೆ.

ಇ) 2000-2001ನೇ ಸಾಲಿನಲ್ಲಿ ಮೈಸೂರು ಜಿಲ್ಲೆಗೆ ಸಂಬಂಧಪಟ್ಟಂತೆ ಔಷಧ ಪರಿವೀಕ್ಷಕರು 9 ಪ್ರಕರಣಗಳ ಜಪ್ತಿ ಮಾಡಿದ್ದು ತನಿಖೆ ಮುಂದುವರಿದಿದೆ.

ಈ) 1) ರಾಜ್ಯದಲ್ಲಿ ಮಾನಸಿಕ ಆರೋಗ್ಯ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಹಾಗೂ ಜಿಲ್ಲಾ ಆಸ್ಪತ್ರೆಗಳಲ್ಲಿ ಮಾನಸಿಕ ಚಿಕಿತ್ಸೆ ಕೇಂದ್ರಗಳನ್ನು ತೆರೆಯಲಾಗಿದೆ.

2) ಪ್ರಾರಂಭಿಕವಾಗಿ ಹದಿಮೂರು ಜಿಲ್ಲೆಗಳಲ್ಲಿ ವ್ಯಸನಿಗಳಿಗೆ ಚಿಕಿತ್ಸೆ, ಹಾಗೂ ಆರೋಗ್ಯ ಶಿಕ್ಷಣ ನೀಡಲಾಗುತ್ತಿದೆ.

3) ಮಾನಸಿಕ ಆರೋಗ್ಯ ಮತ್ತು ನರ ವಿಜ್ಞಾನ ಸಂಸ್ಥೆಯ ತಜ್ಞರ ಸಹಾಯದಿಂದ ಶಾಲಾ ಮತ್ತು ಕಾಲೇಜುಗಳಲ್ಲಿ ಚರ್ಚೆಗಳನ್ನು ಮತ್ತು ಆಕಾಶವಾಣಿ ಹಾಗೂ ದೂರದರ್ಶನದಲ್ಲಿ ಜಾಹಿರಾತು ಮತ್ತು ಚರ್ಚೆಗಳನ್ನು ನಡೆಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

4) ಎನ್.ಜಿ.ಓ.ರ ಮತಿಯಿಂದಲೂ ಪ್ರಚಾರ ಹಾಗೂ ಶಿಕ್ಷಣ ನೀಡಲಾಗುತ್ತಿದೆ.

ಜನಸಂಖ್ಯೆ ಹತೋಟಿ ಮಾರ್ಗೋಪಾಯಗಳು

2897 - ಶ್ರೀ ಎ.ಎಸ್. ಗುರುಸ್ವಾಮಿ (ಚಾಮುಂಡೇಶ್ವರಿ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಒತ್ತಾಯಕ್ಕೊಳಪಡಿಸಿ ಕುಟುಂಬ ನಿಯಂತ್ರಣ ಯೋಜನೆಯನ್ನು ಜಾರಿಗೆ ತಂದಿರುವ ಪ್ರಕರಣಗಳಿವೆಯೆ? ಇದ್ದಲ್ಲಿ ಅವುಗಳ ಸಂಖ್ಯೆ ಎಷ್ಟು?.